625 (965) ಶ್ರೀ ರಾಜೇಂದ್ರನ್ ಎಸ್ (ಕೆ ಜಿ ಎಫ್) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಿನಾಂಕ 30–12–2006ರ ದಿನ ಪತ್ರಿಕೆಯಲ್ಲಿ "ಗಂಗಾ ಕಲ್ಯಾಣ" ಹಣ ಖರ್ಚಾದದ್ದು ಹೇಗೆ ಎಂಬ ಶೀರ್ಷಿಕೆಯಲ್ಲಿ ಡಾ ಬಿ ಆರ್ ಅಂಬೇಡ್ಕರ್ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕರು ಕೊಳವೆ ಬಾವಿಗಳ ಟೆಂಡರ್ ಪ್ರಕ್ರಿಯೆಯನ್ನು ಅಂತಿಮಗೊಳಿಸದೆ ಟೆಂಡರ್ ಸಲ್ಲಿಸಿದವರೊಂದಿಗೆ ಮಾತುಕತೆಗೆ ಮುಂದಾಗಿರುವುದಾಗಿ ವರದಿಯಾಗಿರುವುದು ನಿಜವಲ್ಲವೇ?

ಆ) ಹಾಗಿದ್ದಲ್ಲಿ, ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡಿದೆಯೆ?

ಇ) ಹಾಗಿಲ್ಲದಿದ್ದಲ್ಲಿ, ವಿಳಂಬಕ್ಕೆ ಕಾರಣವೇನು?

ಶ್ರೀ ಬಾಲಚಂದ್ರ ಲ ಜಾರಕಿಹೊಳಿ (ಸಮಾಜ ಕಲ್ಯಾಣ ಸಚಿವರು)

ಅ) ಟೆಂಡರ್ ಪ್ರಕ್ರಿಯೆ ಅಂತಿಮಗೊಳಿಸದೇ ಟೆಂಡರ್ ಸಲ್ಲಿಸಿದವರೊಂದಿಗೆ ಮಾತುಕತೆಗೆ ಮುಂದಾಗಿರುವುದಾಗಿ ದಿನಾಂಕ 30–12–06ರ ದಿನಪತ್ರಿಕೆಯಲ್ಲಿ ವರದಿ ಪ್ರಕಟವಾಗಿರುವುದು ನಿಜವಲ್ಲ

ಆ) ಹೌದು, ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡಿದೆ

ಇ) ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡಿರುವುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ

626 (966) ಶ್ರೀ ರಾಜೇಂದ್ರನ್ ಎಸ್(ಕೆ ಜಿ ಎಫ್) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಮಾಜ ಕಲ್ಯಾಣ ಇಲಾಖೆಯಲ್ಲಿ ಗಂಗಾ ಕಲ್ಯಾಣ ಯೋಜನೆಗೆ ನಿಗದಿಪಡಿಸಿರುವ ಅನುದಾನ ಮತ್ತು ಖರ್ಚಾಗಿರುವ ಹಣವೆಷ್ಟು?

ಆ) ಹಾಗಿದ್ದಲ್ಲಿ, ವಿಳಂಬಕ್ಕೆ ಕಾರಣವೇನು?

ಇ) ಕೆ ಜಿ ಎಫ್ ಮತಕ್ಷೇತ್ರಕ್ಕೆ ಮಂಜೂರಾಗಿರುವ ಕೊಳವೆ ಬಾವಿಗಳೆಷ್ಟು ಇವುಗಳನ್ನು ಅನುಷ್ಠಾನಗೊಳಿಸಲಾಗಿದೆಯೇ?

ಈ) ಹಾಗಿದ್ದಲ್ಲಿ, ಗುತ್ತಿಗೆದಾರರು ಯಾರು?

ಶ್ರೀ ಬಾಲಚಂದ್ರ ಲ ಜಾರಕಿಹೊಳಿ (ಸಮಾಜ ಕಲ್ಯಾಣ ಸಚಿವರು)

ಅ) ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ನಿಯಮಿತ ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮಕ್ಕೆ ಗಂಗಾ ಕಲ್ಯಾಣ ಯೋಜನೆ ಅನುಷ್ಠಾನಕ್ಕಾಗಿ 2006–07ನೇ ಸಾಲಿನ ಆಯವ್ಯಯದಲ್ಲಿ ರೂ 2200 00 ಲಕ್ಷಗಳನ್ನು ಒದಗಿಸಿದೆ ಜನವರಿ 2007ರ ಅಂತ್ಯದವರೆಗೆ ಒಟ್ಟು ರೂ 319 66 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ

ಡಿ ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ

ಡಿ ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮಕ್ಕೆ ಗಂಗಾ ಕಲ್ಯಾಣ ಯೋಜನೆ ಅನುಷ್ಠಾನಕ್ಕಾಗಿ 2006–07ನೇ ಸಾಲಿನ ಆಯವ್ಯಯದಲ್ಲಿ 2350 00 ಲಕ್ಷ ರೂ ಗಳನ್ನು ಒದಗಿಸಿದೆ ಜನವರಿ 2007ರ ಅಂತ್ಯದವರೆಗೆ ಒಟ್ಟು 1265 ರೂ ಲಕ್ಷಗಳನ್ನು ವೆಚ್ಚ ಮಾಡಲಾಗಿದೆ

ಡಾ ಬಿ ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ

ಗಂಗಾ ಕಲ್ಯಾಣ ಯೋಜನೆಯಡಿ 2006–07ನೇ ಆರ್ಥಿಕ ಸಾಲಿನ ಆಯವ್ಯವದಲ್ಲಿ ಈ ಕೆಳಕಂಡಂತೆ ಅನುದಾನ ನಿಗದಿಪಡಿಸಲಾಗಿದೆ

(ರೂ ಲಕ್ಷಗಳಲ್ಲಿ)

		ಪರಿಶಿಷ್ಟ ಜಾತಿ	**ಪರಿಶಿಷ್ಟ ವರ್ಗ**
1	ಬ್ಯಾಕ್‌ಲಾಗ್‌ನಲ್ಲಿ ಉಳಿದಿರುವ ಹಣ	1569 83	782 15
2	ಆಯವ್ಯಯದಲ್ಲಿ ನಿಗದಿಪಡಿಸಿದ ಹಣ	3540 00	3450 00
3	ಕ್ರೋಢೀಕೃತ ಅನುದಾನದಲ್ಲಿ ನೀರೀಕ್ಷಿಸಿದ ಹಣ	5310 00	1100 00
	ಒಟ್ಟು	10419 83	5332 15
ಬಿಡುಗಡೆಯಾಗಿರು ಹಣ			
1	ಬ್ಯಾಕ್‌ಲಾಗ್ ಹಣ	1569 83	782 15

2	ಆಯವ್ಯಯದಲ್ಲಿ ಬಿಡುಗಡೆಯಾದ ಹಣ	2655 00	2587 00
3	ಕ್ರೋಢೀಕೃತ ಅನುದಾನದಲ್ಲಿ ಬಿಡುಗಡೆಯಾದ ಹಣ	1500 10	375 00
	ಒಟ್ಟು	5724 93	744 15
	ಒಟ್ಟು ಖರ್ಚಾದ ಹಣ	**3124 90**	**1191 85**
	ಬಾಕಿ ಉಳಿದಿರುವ ಹಣ	**2600 03**	**2552 30**

ಆ) ಗಂಗಾ ಕಲ್ಯಾಣ ಯೋಜನೆಯಲ್ಲಿ ಕೊಳವೆ ಬಾವಿಗಳನ್ನು ಕೊರೆಯಲು ಈ ಹಿಂದೆ ರಾಜ್ಯಮಟ್ಟದಲ್ಲಿ ಟೆಂಡರ್ ಆಹ್ವಾನಿಸಿ, ದರಗಳನ್ನು ನಿಗದಿಪಡಸಲಾಗುತ್ತಿತ್ತು 2006–07ನೇ ಸಾಲಿನಿಂದ ಜಿಲ್ಲಾಮಟ್ಟದಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ರಚಿಸಿರುವ ಜಿಲ್ಲಾ ಸಮಿತಿಯು ಆಯಾ ಜಿಲ್ಲೆಗಳಲ್ಲಿ ಪ್ರತ್ಯೇಕವಾಗಿ ಟೆಂಡರ್ ಪ್ರಕಟಣೆ ನೀಡಿ, ದರಗಳನ್ನು ಅಂತಿಮಗೊಳಿಸುವಲ್ಲಿ ಕಾಲಾವಕಾಶ ತೆಗೆದುಕೊಂಡಿದ್ದರಿಂದ ಸ್ವಲ್ಪ ಮಟ್ಟಿನ ವಿಳಂಬವಾಗಿರುತ್ತದೆ ಈಗಾಗಲೇ ಜಿಲ್ಲಾವಾರು ದರಗಳನ್ನು ನಿಗದಿಗೊಳಿಸಿ ಎಲ್ಲಾ ಏಜೆನ್ಸಿಗಳಿಗೆ ಕಾರ್ಯಾದೇಶ ನೀಡಲಾಗಿರುತ್ತದೆ ಕೊಳವೆ ಬಾವಿಗಳನ್ನು ಕೊರೆಯುವ ಕೆಲಸ ಪ್ರಗತಿಯಲ್ಲಿರುತ್ತದೆ

ಇ) ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ನಿಯಮಿತ ಕೆ ಜಿ ಎಫ್ ವಿಧಾನಸಭಾ ಕ್ಷೇತ್ರಕ್ಕೆ 8 ಕೊಳವೆಬಾವಿಗಳ ಗುರಿಯನ್ನು ನಿಗದಿಪಡಿಸಲಾಗಿದೆ ಇದುವರೆವಿಗೆ ಈ ಕ್ಷೇತ್ರದಿಂದ ಮತೀಯ ಅಲ್ಪಸಂಖ್ಯಾಂತರ ವರ್ಗದವರಿಂದ ಕೊಳವೆಬಾವಿಗಾಗಿ ಅರ್ಜಿಗಳು ಸ್ವೀಕೃತವಾಗಿರುವುದಿಲ್ಲ ಹಾಗೂ ಅಲ್ಪ ಸಂಖ್ಯಾತರ ಜಮೀನು ಲಭ್ಯವಿರುವುದಿಲ್ಲವೆಂದು ತಿಳಿದುಬಂದಿರುತ್ತದೆ

ಡಿ ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ

ಕೆ ಜಿ ಎಫ್ ವಿಧಾನ ಸಭಾ ಕ್ಷೇತ್ರಕ್ಕೆ 8 ವೈಯಕ್ತಿಕ ಕೊಳವೆ ಬಾವಿಗಳ ಯೋಜನೆ ಗುರಿ ನಿಗದಿಪಡಿಸಲಾಗಿರುತ್ತದೆ ಈ ಪೈಕಿ ಗಂಗಾ ಕಲ್ಯಾಣ ಯೋಜನೆಯ ಆಯ್ಕೆ ಸಮಿತಿಯಿಂದ ಒಂದು ಫಲಾನುಭವಿ ಮಾತ್ರ ಆಯ್ಕೆಗೊಂಡಿದ್ದು, ಸದರಿ ಫಲಾನುಭವಿಯ ಜಮೀನಿನಲ್ಲಿ ಕೊಳವೆ ಬಾವಿ ಕೊರೆಯಿಸಲು ಈಗಾಗಲೇ ಕಾರ್ಯಾದೇಶ ನೀಡಲಾಗಿದೆ

ಡಾ ಬಿ ಆರ್ ಅಂಬೇಡ್ಕರ್ ಅಭಿವೃದ್ಧಿ ನಿಗಮ

2006–07ನೇ ಸಾಲಿನ ಕ್ರಿಯಾ ಯೋಜನೆಯಲ್ಲಿ ಕೆ ಜಿ ಎಫ್ ವಿಧಾನಸಭಾ ಕ್ಷೇತ್ರಕ್ಕೆ ಪರಿಶಿಷ್ಟ ಜಾತಿಗೆ 10 ಮತ್ತು ಪರಿಶಿಷ್ಟ ವರ್ಗಕ್ಕೆ 05 ಕೊಳವೆಬಾವಿಗಳ ಗುರಿ ನಿಗದಿಪಡಿಸಲಾಗಿದೆ ಇದುವರೆವಿಗೂ ಈ ಕ್ಷೇತ್ರದಿಂದ ಕೊಳವೆಬಾವಿ ಸೌಲಭ್ಯ ಕೋರಿ ಅರ್ಜಿಗಳು ಬಂದಿರುವುದಿಲ್ಲ ಈ ಬಗ್ಗೆ ಜಿಲ್ಲಾ ವ್ಯವಸ್ಥಾಪಕರಿಗೆ ಫಲಾನುಭವಿಗಳನ್ನು ಗುರುತಿಸಲು ಸೂಕ್ತ ಮಾರ್ಗದರ್ಶನ ನೀಡಲಾಗಿದೆ

ಈ) **ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ನಿಯಮಿತ**

ಮೆ ಕೆ ಎಸ್ ಎಂ ಆಗ್ರೋ ರಿಗ್ ಸರ್ವಿಸ್, ಮಾರುತಿ ನಗರ, ಶ್ರೀನಿವಾಸಪುರ, ಕೋಲಾರ ಜಿಲ್ಲೆ, ಇವರನ್ನು ಕೊಳವೆಬಾವಿ ಕೊರೆಯಲು ನೇಮಕ ಮಾಡಲಾಗಿರುತ್ತದೆ

ಡಿ **ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ**

ಮೇ ಕೆ ಎಸ್ ಎಂ ಆಗ್ರೋ ರಿಗ್ ಸರ್ವಿಸ್, ಶ್ರೀನಿವಾಸಪುರ ಹಾಗೂ ಮೆ ಶ್ವೇತಾ ಬೋರ್‌ವೆಲ್ಸ್, ಮುಳಬಾಗಿಲು ಈ ಎರಡು ಏಜೆನ್ಸಿಗಳನ್ನು ಕೋಲಾರ ಜಿಲ್ಲೆಯ ಕೊಳವೆ ಬಾವಿ ಕೊರೆಯಲು ನೇಮಕ ಮಾಡಲಾಗಿರುತ್ತದೆ

ಡಾ: ಬಿ ಆರ್ ಅಂಬೇಡ್ಕರ್ ಅಭಿವೃದ್ಧಿ ನಿಗಮ

ಮೆ ಶ್ವೇತಾ ಬೋರ್‌ವೇಲ್ಸ್, ಮುಳಬಾಗಿಲು

ಮೆ ಕೆ ಎಸ್ ಎಂ ಬೋರ್‌ವೆಲ್ಸ್, ಶ್ರೀನಿವಾಸಪುರ

627 (533) ಶ್ರೀ ಆರ್ ರೋಷನ್ ಬೇಗ್ (ಜಯಮಹಲ್) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ತಾಲ್ಲೂಕು ಆಸ್ಪತ್ರೆಗಳನ್ನು ಮೇಲ್ದರ್ಜೆಗೇರಿಸುವ ಪ್ರಸ್ತಾವನೆ ಇದೆಯೇ?

ಆ) ಹಾಗಿದ್ದಲ್ಲಿ ವಿವರಗಳನ್ನು ನೀಡುವುದು?

ಇ) ರಾಜ್ಯದಲ್ಲಿ 2000 ವೈದ್ಯರನ್ನು ನೇಮಕ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ?

ಈ) ಹಾಗಿದ್ದಲ್ಲಿ ವಿವರಗಳನ್ನು ನೀಡುವುದು?